ತೀಡಿ ನನ್ನನ್ನು ಬೆಳೆಸುತ್ತಿದ್ದರು. ಮೊತ್ತ ಮೊದಲು ಪುಸ್ತಕರೂಪದಲ್ಲಿ ಪ್ರಕಟವಾಗಿದ್ದ ನನ್ನ 'ಅತ್ತ ಇತ್ತಗಳ ಸುತ್ತಮುತ್ತ' ಕಥಾಸಂಕಲಕ್ಕೆ ಕತೆಗಳನ್ನು ಆರಿಸಿ ಕೊಟ್ಟವರು ದೇವನೂರ ಮಹಾದೇವ. ನನ್ನ ಕಥಾಸಂಕಲನಕ್ಕೆ ಮೊದಲ ಮತ್ತು ಕೊನೆಯ ಬಾರಿಗೆಂಬಂತೆ ಮುನ್ನುಡಿ ಬರೆದು ಬೆನ್ನು ತಟ್ಟಿದವರು ಜಿ. ರಾಜಶೇಖರ.

ಮುಸ್ಲಿಮ್ ಹೆಣ್ಣುಗಳೇ ನನ್ನ ಕತೆಗಳ 'ವಸ್ತು' ಮಾತ್ರವಲ್ಲ, ಕತೆಗಳ 'ಟಾರ್ಗೆಟ್' ಕೂಡಾ. ಆದ್ದರಿಂದಲೇ, ನಾನು ಬಳಸುವ ಪದಗಳು ಏಳು–ಎಂಟನೇ ತರಗತಿಯ ಪಠ್ಯಪುಸ್ತಕಗಳಲ್ಲಿ ಬಳಸಲಾಗುತ್ತಿದ್ದ ಪದಗಳ ಮಿತಿಯನ್ನು ಮೀರುವಂತಿರಲಿಲ್ಲ. ಆದ್ದರಿಂದಲೇ, ಕತೆಗಳ ಭಾಷೆಯಲ್ಲಿ, ನಿರೂಪಣಾ ವಿಧಾನಗಳಲ್ಲಿ ಯಾವುದೇ ಬಗೆಯ ಹೊಸ ಪ್ರಯೋಗಗಳ ಗೋಜಿಗೇ ಉದ್ದೇಶಪೂರ್ವಕವಾಗಿ ಶ್ರಮಿಸಲಿಲ್ಲ. ಕಥಾತಂತ್ರ–ವಿನ್ಯಾಸಗಳಿಗಿಂತ ಕಥಾವಸ್ತುವಿಗೇ ಹೆಚ್ಚು ಗಮನ ಕೊಟ್ಟದ್ದರಿಂದ ನನ್ನ ಕತೆಗಳ ಭಾಷೆ 'ಚಂದಮಾಮ'ದ ಭಾಷೆಯಂತೆ ತೀರಾ ಸರಳವೆಂದು ಒಬ್ಬರು ವಿಮರ್ಶಕರು ಬರೆದದ್ದುಂಟು. ಅಚ್ಚರಿಯೆಂದರೆ, ಅದರಿಂದ ನನಗೆ ನಷ್ಟವೇನೂ ಆಗಿರಲಿಲ್ಲ. ಯಾವುದೇ ಗೊಂದಲವಿಲ್ಲದ, ಅರ್ಥ ಮಾಡಿಕೊಳ್ಳಲು ಹೆಚ್ಚು ಮಂಡೆಬಿಸಿ ಮಾಡಿಕೊಳ್ಳುವ ಅಗತ್ಯವಿಲ್ಲದ ನೇರ ನಿರೂಪಣೆಯ ನನ್ನ ಕತೆಗಳಿಗೆ ಓದುಗರ ಸಂಖ್ಯೆ ಹೆಚ್ಚೇ ಆಯಿತು. ನನ್ನ ಬರಹದ ಭಾಷೆ ಓದುಗಸ್ನೇಹಿ ಆಗಿಲ್ಲದಿರುತ್ತಿದ್ದರೆ, ಎರಡು ಕಿಲೋ ತೂಕದ ನನ್ನ ಕಾದಂಬರಿಯೂ ಎರಡೇ ವರ್ಷಗಳಲ್ಲಿ ಮೂರು ಮುದ್ರಣ ಕಾಣುತ್ತಿರಲಿಲ್ಲ.

ಇಲ್ಲೊಂದು ಚಾರಿತ್ರಿಕ ಸಾಕ್ಷ್ಯವನ್ನು ದಾಖಲಿಸಲೇಬೇಕು.

ಮೂವತ್ತೈದು ವರ್ಷಗಳ ಹಿಂದೆ, ನನ್ನ 'ಜೆಹಾದ್' ಕಾದಂಬರಿಯ ಕಾರಣದಿಂದ, 'ತರಂಗ'ದ ಪ್ರಸಾರ ಮೂವತ್ತು ಸಾವಿರದಿಂದ ಒಂದು ಲಕ್ಷಕ್ಕೇರಿದ ಸಂಗತಿಯನ್ನು ಅದರ ಸಂಪಾದಕರಾಗಿದ್ದ ಸಂತೋಷಕುಮಾರ್ ಗುಲ್ವಾಡಿಯವರು ಸಂಭ್ರಮದಿಂದ ಪ್ರಕಟಿಸಿ ಅಭಿನಂದಿಸಿದ್ದರು. ಅದಾದ ಕೆಲವೇ ದಿನಗಳಲ್ಲಿ, 'ಸುಧಾ'ದ ಸಂಪಾದಕ ಎಂ.ಬಿ. ಸಿಂಗ್, 'ನಿಮ್ಮ ಕಾದಂಬರಿಯ ಕಾರಣದಿಂದ, ದಕ್ಷಿಣ ಕನ್ನಡದಲ್ಲಿ ಕನ್ನಡ ಪತ್ರಿಕೆಗಳನ್ನು ಓದುವವರ ಸಂಖ್ಯೆ ಹೆಚ್ಚಾಯಿತು. ನಮ್ಮ 'ಸುಧಾ'ದ ಪ್ರಸಾರ ಸಂಖ್ಯೆಯೂ ಏರಿತು. ಅದಕ್ಕೆ ಕಾರಣ, ನಿಮ್ಮ ಕಥಾವಸ್ತುಗಳು ಮತ್ತು ನಿಮ್ಮ ಕನ್ನಡ' ಎಂದಿದ್ದರು! ನನ್ನ ಮಾತೃಭಾಷೆ ಬ್ಯಾರಿ. ಬ್ಯಾರಿ ಮಾತೃಭಾಷಿಕನು ಮಾತ್ರ ಕನ್ನಡ ಅಕ್ಷರ ಮಾಲೆಯ ಎಲ್ಲ ಅಕ್ಷರಗಳನ್ನೂ ತಪ್ಪಿಲ್ಲದೆ ಉಚ್ಚರಿಸಬಲ್ಲ ಎಂದರೆ ತೀರಾ ಉತ್ಪ್ರೇಕ್ಷೆಯೇನೂ ಆಗಲಾರದು. ನನ್ನ ಹೆಸರಿನ ಯಾವುದೇ ಅಕ್ಷರವನ್ನೂ ಬ್ಯಾರಿಭಾಷಿಕ ತಪ್ಪಾಗಿ ಉಚ್ಚರಿಸುವುದಿಲ್ಲ ಎಂಬುದನ್ನು 'ಕಯ್ಯಾರ ಕಿಞ್ಞಣ್ಣ ರೈ'ಯವರ ಮೇಲೆ ಆಣೆ ಹಾಕಿ ಪ್ರಮಾಣ ಮಾಡುವೆ.

ತಲ್ಲಣಗಳಿಗೆಂದೂ ನಾನು ಕಣ್ಣು ಮುಚ್ಚಿಕೊಂಡವನಲ್ಲ ಎಂಬುದನ್ನು ಮೊದಲೇ ನಿವೇದಿಸಿಕೊಂಡಿರುವೆ. ಹಾಗೆಂದು ನಿಜಗಳನ್ನು ನಾನೆಂದೂ ಕತೆ ಮಾಡಲಾರೆ. ನಾನು ಕಲಬುರ್ಗಿಯಲ್ಲಿದ್ದ ದಿನಗಳ ಒಂದು ಸಂಗತಿಯನ್ನು ಹೇಳಿ ನನ್ನ ಮಾತನ್ನು ಸಾಬೀತುಗೊಳಿಸುವೆ. ಒಂದು ಬೆಳಗ್ಗೆ ಬ್ಯಾಂಕಿಗೆ ಹೋಗುತ್ತಿರುವಾಗ ಬ್ಯಾಂಕ್ ಶಾಖೆಯ ಪಕ್ಕದಲ್ಲೇ ಇರುವ ಪೊಲೀಸ್ ಸ್ಟೇಷನ್ ಎದುರು ಜನಜಂಗುಳಿ ಕಾಣಿಸಿ ಕುತೂಹಲದಿಂದ ಅವರ ನಡುವೆ ಸೇರಿಕೊಂಡೆ.

ಸ್ಟೇಷನ್ ಆವರಣದ ಗೋಡೆಗೊರಗಿ ಒಬ್ಬ ನಡುವಯಸ್ಸಿನ ಒಬ್ಬರು ನಿಂತಿದ್ದರು. ಅವರ ಬಲಕೈಯಲ್ಲಿ ಹುಡುಗಿಯೊಬ್ಬಳ ರುಂಡ! ಅದರಿಂದ ಸೋರುತ್ತಿದ್ದ ರಕ್ತದಲ್ಲಿ ಹುಡುಗಿಯ ಮುಡಿಯೆಲ್ಲ ಕೆಂಪಾಗಿತ್ತು. ಒಂದಿಬ್ಬರು ಪೊಲೀಸರು ಸ್ಟೇಷನ್ ಮೆಟ್ಟಿಲ ಮೇಲೆ ದಂಗಾಗಿ ನಿಂತಿದ್ದರು. ಅಕ್ಕ ಪಕ್ಕದವರೊಡನೆ ವಿಚಾರಿಸಿದಾಗ ಗೊತ್ತಾದ ಕತೆ ಭಯಾನಕವಾಗಿತ್ತು!